**ದಿನಾಂಕಃ 08-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಆರ್.ಹೆಚ್. ವಾದಿಯರ ಪರ ವಕೀಲರಿಂದಃ**

1. ಈ ದಾವೆಯನ್ನು ಯಾವ ಯಾವ ಆಸ್ತಿಗಳಿಗೆ ಸಲ್ಲಿಸಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿದೆ. ಕೋಟ್ರಗೌಡ ಮನೆತನದ ಬಗ್ಗೆ ನನಗೆ ಗೊತ್ತಿದೆ. ಸದರಿಯವರಿಗೆ ದಾವಾಸ್ತಿಗಳು 1980 ರಲ್ಲಿ ಪಾಲು ವಿಭಾಗದ ಮೂಲಕ ಬಂದಿರುತ್ತದೆ. ಸದರಿ ಆಸ್ತಿಗಳು ಪಾಲು ವಿಭಾಗ ಮಾಡಿಕೊಳ್ಳಲು ಕೋಟ್ರಗೌಡರವರಿಗೆ ಯಾರಿಂದ ಬಂದಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 1957 ರಲ್ಲಿ ಅವರ ಹಿರಿಯರಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ.

**2.** ದಾವಾ ಶೆಡ್ಯೂಲ್-ಅ- 1 ಮತ್ತು 2 ಆಸ್ತಿಗಳನ್ನು ನಾನು ಖರೀದಿ ಮಾಡುವುದಕ್ಕಿಂತ ಪೂರ್ವದಲ್ಲಿ ಯಾರಿಂದ ಆಸ್ತಿ ಬಂದಿರುತ್ತದೆ ಎನ್ನುವ ಬಗ್ಗೆ ನಾನು ವಿಚಾರ ಮಾಡಿರುತ್ತೇನೆ. ಸದರಿ ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ಕೋಟ್ರಗೌಡ, ಸಿದ್ದನಗೌಡ ಮತ್ತು ಬಸನಗೌಡರವರಿಗೆ ಸದರಿ ಆಸ್ತಿಗಳನ್ನು ಖರೀದಿ ಮಾಡುವ ಹಕ್ಕು ಇದೆಯಾ ಎನ್ನುವ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆದಿಲ್ಲ. ಸದರಿ ಆಸ್ತಿಗಳನ್ನು ನಾನು ಖರೀದಿ ಮಾಡುವ ಪೂರ್ವದಲ್ಲಿ ಆರ್ ಟಿ ಸಿ ಉತಾರ ಮತ್ತು ಋಣಭಾರ ರಾಹಿತ್ಯ ಪತ್ರವನ್ನು ನೋಡಿರುತ್ತೇನೆ. ಸದರಿ ಆಸ್ತಿಗಳ ಚಾಲ್ತಿ ಆರ್ ಟಿ ಸಿ ಉತಾರವನ್ನು ನೋಡಿರುತ್ತೇನೆ. ಎರಡು ವರ್ಷಗಳ ಹಿಂದಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನೋಡಿರುತ್ತೇನೆ. ಸದರಿ ಚಾಲ್ತಿ ಆರ್ ಟಿ ಸಿ ಉತಾರವಿನಲ್ಲ ಕೋಟ್ರಗೌಡರವರು ಸಾಲ ಪಡೆದ ಬಗ್ಗೆ ಬೋಜಾ ಇತ್ತು. ಕರ್ನಾಟಕ ವಿಕಾಸ

ಗ್ರಾಮೀಣ ಬ್ಯಾಂಕ್, ದೇವಗಿರಿಯಲ್ಲಿ ರೂ. 75,000/- ಸಾಲ ಇದ್ದ ಬಗ್ಗೆ ಇತ್ತು. ಸದರಿ ಸಾಲ ಯಾವ ವರ್ಷದ ಸಾಲದ ಬೋಜಾ ಎಂದು ಇತ್ತು ಎನ್ನುವುದನ್ನು ನಾನು ನೋಡಿಲ್ಲ. ನಾನು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ, ದೇವಗಿರಿಗೆ ಹೋಗಿ ಎಷ್ಟು ಸಾಲ ಇದೆ ಎನ್ನುವ ಬಗ್ಗೆ ವಿಚಾರ ಮಾಡಿದ್ದೆ, ರೂ. 75,000/- ಗಳ ಸಾಲ ಇತ್ತು. ಆ ಬಗ್ಗೆ ಬ್ಯಾಂಕನಿಂದ ದಾಖಲೆಗಳನ್ನು ತೆಗೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಸಾಲವನ್ನು ನಾನೇ ತಿರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಸಾಲವನ್ನು ತಿರಿಸಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಸದರಿ ಸಾಲವನ್ನು ತಿರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿರುವುದರಿಂದ, ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಮುಂದಿನ ದಿನಾಂಕವನ್ನು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.